ಮೂಲಭೂತ ಸೌಕರ್ಯವನ್ನು ಒದಗಿಸಲು ಸರ್ಕಾರ ಬಹಳಷ್ಟು ವೆಚ್ಚ ಮಾಡಬೇಕಾಗುತ್ತದೆ. ಈ ಬಗ್ಗೆ ಎಲ್ಲಾ ಆಗು ಹೋಗುಗಳ ಬಗ್ಗೆ ಕಾನೂನು ಇಲಾಖೆಯ ಜೊತೆ ಚರ್ಚೆ ಮಾಡಿ, ಪರಿಶೀಲನೆ ಮಾಡಿ, ತಾವುಗಳೇನು ತಮ್ಮ ಭಾವನೆಗಳನ್ನು ವ್ಯಕ್ತ ಮಾಡಿದ್ದೀರಿ ಅದೆಲ್ಲಾ ಗೊತ್ತಾಗುತ್ತದೆ. ನಾನು ಹೇಳಿದಂತೆ, ಈ ಹಿಂದೆಯೇ ಅವರು ತೀರ್ಮಾನ ತೆಗೆದುಕೊಳ್ಳಬೇಕಾಗಿತ್ತು. 16–17 ವರ್ಷಗಳ ಕಾಲಾವಕಾಶವಿದ್ದರೂ ತೆಗೆದುಕೊಂಡಿಲ್ಲ. ಆದುದರಿಂದ ಮುಂದೆ ಅದನ್ನು ಯಾವರೀತಿ ಇತ್ಯರ್ಥ ಮಾಡಬಹುದೆಂಬುದನ್ನು ಚರ್ಚೆ ಮಾಡಿ ಮತ್ತೆ ನಾನು ತಿಳಿಸುತ್ತೇನೆ.

ಅಧ್ಯಕ್ಷರು: ಆದಷ್ಟು ಬೇಗ ಸಭೆ ಕರೆಯಿರಿ, ಕಾನೂನಿಗೆ ವಿರೋಧವಾಗಿ ಸಿ ಅಂಡ್ ಡಿ ಲ್ಯಾಂಡ್ ಅನ್ನು ಲ್ಯಾಂಡ್ ಬ್ಯಾಂಕಿಗೆ ಕೊಡುವಾಗ ರೆವಿನ್ಯೂನಿಂದ ವರ್ಗಾವಣೆ ಮಾಡಬಾರದೆನ್ನುವ ಕಂಡೀಷನ್ ಅನ್ನು ಕೊಟ್ಟಿದ್ದರೂ ಕೂಡ, ವರ್ಗಾವಣೆ ಮಾಡಿದ್ದಾರೆ, ಮಲೆನಾಡು ಪ್ರದೇಶದಲ್ಲಿ ಇದು ಬಹಳ ಗಂಭೀರವಾದ ಸಮಸ್ಯೆಯಾಗಿದೆ, ಇದು ಆದಷ್ಟು ಶೀಘ್ರ ಇತ್ಯರ್ಥವಾಗಬೇಕು.

ಶ್ರೀ ಜಿ. ಕರುಣಾಕರ ರೆಡ್ಡಿ: ಖಂಡಿತ ಸಭೆ ಕರೆಯುತ್ತೇವೆ, ಮುಖ್ಯಮಂತ್ರಿಗಳು ಇದನ್ನು ಗಮನಿಸಿದ್ದಾರೆ, ಆದಷ್ಟು ಬೇಗ ನಾವು ಮಾತನಾಡುತ್ತೇವೆ.

ಶ್ರೀ ಎಸ್.ಆರ್.ವಿಶ್ವನಾಥ್: ಮಾನ್ಯ ಅಧ್ಯಕ್ಷರೆ, ಅಲ್ಲಿಯವರೆಗೆ ಕ್ರಿಮಿನಲ್ ಕೇಸ್ ಹಾಕಿ ಒಕ್ಕಲೆಬ್ಬಿಸುವುದು ಬೇಡವೆಂದು ಹೇಳಿ.

ಅಧ್ಯಕ್ಷರು: ಅವರು ಮಾತನಾಡುತ್ತಾರೆ. ಗೋಪಾಲ ಭಂಡಾರಿಯವರು ಇಲ್ಲ, ಮುನಿಯಪ್ಪನವರು ಇಲ್ಲ, ಆರ್.ನರೇಂದ್ರರವರು ಇಲ್ಲ, ಈಶ್ವರ್ ಭೀಮಣ್ಣ ಖಂಡ್ರೆ ಇಲ್ಲ, ಶಿವಲಿಂಗೇ ಗೌಡರು ಇಲ್ಲ, ಸಂಪಂಗಿಯವರಿಗಿಲ್ಲ. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

(ಆ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಎಸ್.ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ 6.6.2011ರ 1ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 32 ಪ್ರಶ್ನೆಗಳ ಪೈಕಿ 22 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು.

(ಅನುಬಂಧ–I)

(ಪ್ರಶ್ನೋತ್ತರ ವೇಳೆ ಮುಕ್ತಾಯವಾಯಿತು)

3. ಪ್ರತಿಪಕ್ಷವನ್ನು ಸದನಕ್ಕೆ ಹಾಜರಾಗುವಂತೆ ಕರೆಯಲು ಸರ್ಕಾರಕ್ಕೆ ಮನವಿ

ಶ್ರೀ ಪಿ.ಎಂ.ನರೇಂದ್ರ ಸ್ವಾಮಿ: ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದವರ ಜೊತೆಗೆ ಒಮ್ಮೆ ಚರ್ಚೆ ಮಾಡಿ ಈ ಬಿಲ್‌ಗಳನ್ನು ಪಾಸ್ ಮಾಡುವುದು ಸಂವಿಧಾನದ ಕ್ರಮವಾಗುತ್ತದೆ, ನಾವು ಕಿರಿಯ ಸದಸ್ಯರು ಈ ಒಂದು ಕೆಟ್ಟ ಪರಂಪರೆಯನ್ನು ಕಾಣುವುದು ಬೇಕಾಗಿಲ್ಲ. ಈ ಬಿಲ್ ಗಳನ್ನು ಪಾಸ್ ಮಾಡುವುದು ಈ ರಾಜ್ಯಕ್ಕೆ ಅವಶ್ಯಕವಾಗಿದೆ. ಈ ಸಂದರ್ಭದಲ್ಲಿ ಸದನವನ್ನು ಸ್ವಲ್ಪ ಕಾಲ ಮುಂದೂಡಿ, ಒಂದು ಪ್ರಯತ್ನ ಮಾಡಿ, ತದನಂತರ, ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುವುದು ಸೂಕ್ತವೆನ್ನುವುದು ನನ್ನ ಬೇಡಿಕೆ.

ಅಧ್ಯಕ್ಷರು: ಅವರನ್ನು ಸಲಹಾ ಸಮಿತಿಯ ಸಭೆಗೂ ಕರೆಯಲಾಗಿತ್ತು, ಬರಲಿಲ್ಲ, ಬಹುಶಃ ಕಾನೂನು ಮತ್ತು ಸಂಸದೀಯ ಸಚಿವರು ಬಹಳ ಪ್ರಯತ್ನ ಮಾಡಿದ್ದಾರೆ, ನಾನೂ ಪ್ರಯತ್ನವನ್ನು ಮಾಡಿದ್ದೇನೆ, ಈಗಲೂ ಸದನದ ಮೂಲಕ ವಿನಂತಿಯನ್ನು ಮಾಡಿದ್ದೇನೆ, ಪ್ರಯತ್ನವನ್ನು ಮಾಡೋಣ.

ಶ್ರೀ ವೆಂಕಟರಮಣಪ್ಪ: ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದವರನ್ನು ಹೊರಗೆ ಇಟ್ಟು ಇಲ್ಲಿ ಬಿಲ್‌ಗಳನ್ನು ಪಾಸ್ ಮಾಡುವುದು ಸರಿಯಲ್ಲ...

(ಗೊಂದಲ)

ಶ್ರೀ ಕೆ.ಜಿ. ಕುಮಾರಸ್ವಾಮಿ: ಅವರನ್ನು ಬರಬೇಡಿ ಎಂದು ಯಾರೂ ಹೇಳಿಲ್ಲ. ಅವರು ಬರಬಹುದು, ಚರ್ಚೆ ಮಾಡಬಹುದು. ಆದರೆ ಅವರು ಬರಲೇ ಇಲ್ಲವಲ್ಲಾ?

ಒಬ್ಬ ಮಾನ್ಯ ಸದಸ್ಯರು: ಅವರು ಮಾತನಾಡಲು ಅವಕಾಶ ಮಾಡಿ ಕೊಡಬೇಕು.

(ಗೊಂದಲ)

ಅಧ್ಯಕ್ಷರು: ನಿಮ್ಮ ಮನವಿಯನ್ನು ಅವರಿಗೆ ತಿಳಿಸುವ ಪ್ರಯತ್ನ ಮಾಡುತ್ತೇನೆ.

ಶ್ರಿ ವೆಂಕಟರಮಣಪ್ಪ: ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದಲ್ಲಿ ತಾವು ಕೆಲಸ ಮಾಡಿದ್ದೀರಿ. ವಿರೋಧ ಪಕ್ಷದವರನ್ನು ದೂರ ಇಟ್ಟು ಸದನ ನಡೆಸುವುದು ಉಚಿತವಲ್ಲ. ವಿರೋಧ ಪಕ್ಷದವರು ಹೊರಗಡೆ ಇದ್ದಾರೆ. ಅವರನ್ನು ಕರೆದು ಮಾತನಾಡುವ ಸೌಜನ್ಯ ಬೇಡವಾ ನಿಮಗೆ?